**ಕರ್ನಾಟಕ ಸರ್ಕಾರ**

**(ಪೊಲೀಸ್ ಇಲಾಖೆ)**

ಸಂಖ್ಯೆ: 83/ಸಿಬ್ಬಂದಿ-3/2014-15(ಭಾಗ-2)

ಸಂಖ್ಯೆ:ಓ.ಬಿ/ 51 /2018 ದಿನಾಂಕ:28.02.2018.

:: **ಅಂತಿಮ ತಿದ್ದುಪಡಿ ಆದೇಶ** ::

ವಿಷಯ: ಗ್ರಾಮೀಣ ಕೃಪಾಂಕ ರಹಿತ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ನೌಕರರ ಜೇಷ್ಟತೆಯನ್ನು ಮರು ನಿಗಧಿಪಡಿಸಿ, ಅಂತಿಮ ತಿದ್ದುಪಡಿ ಆದೇಶವನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:
(1) ಈ ಕಛೇರಿಯ ತಿದ್ದೋಲೆ ಸಮಸಂಖ್ಯೆ ದಿನಾಂಕ:30.12.2013.
(2) ರಿಟ್ ಅರ್ಜಿ(ಸಿವಿಲ್) ಸಂಖ್ಯೆ:386/2014 ಶ್ರೀ ಎಸ್.ಆರ್.ಮಾಣಿಕ್ಯ ಮತ್ತು ಇತರರು ವಿರುದ್ದ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶ ದಿನಾಂಕ:20.11.2015.
(3) ಈ ಕಛೇರಿಯ ಅಂತಿಮ ಜೇಷ್ಟತಾ ಪಟ್ಟಿ ಸಂಖ್ಯೆ:52/ಸಿಬ್ಬಂದಿ-3/2017-18(ಭಾಗ-2), ದಿನಾಂಕ:21.11.2017.
(4) ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 20 ಸೆನೆನಿ 2013, ದಿನಾಂಕ: 20.10.2016.
(5) ಸರ್ಕಾರದ ಪತ್ರ ಸಂಖ್ಯೆ:ಒಇ 127 ಪೊಸಿಪ 2017, ದಿನಾಂಕ: 03.01.2018.
(6) ಈ ಕಛೇರಿಯ ತಾತ್ಕಾಲಿಕ ತಿದ್ದುಪಡಿ ಆದೇಶ ಸಮಸಂಖ್ಯೆ ದಿನಾಂಕ:25.01.2018.

* * * * *

ಈ ಕಛೇರಿಯ ಉಲ್ಲೇಖಿತ(6)ರ ತಾತ್ಕಾಲಿಕ ತಿದ್ದುಪಡಿ ಆದೇಶದಲ್ಲಿ ಮಾನ್ಯ ಭಾರತ ಸರ್ಕಾರದ ಸರ್ವೋಚ್ಛ ನ್ಯಾಯಾಲಯ ಮತ್ತು ಸರ್ಕಾರದ ಆದೇಶ ಮತ್ತು ನಿರ್ದೇಶನಗಳನ್ವಯ 42 ಪಿ.ಎಸ್.ಐ(ಸಿವಿಲ್) ರವರಿಗೆ ಕರ್ತವ್ಯಕ್ಕೆ ವರದಿ ಮಾಡಿದ ದಿನಾಂಕಗಳನ್ನು ಪರಿಗಣಿಸಿ, ಜೇಷ್ಟತೆ ಕ್ರಮ ಸಂಖ್ಯೆ ನೀಡುವ ಸಂಬಂದವಾಗಿ ಈ ಕಛೇರಿಯ ಉಲ್ಲೇಖಿತ(3)ರಲ್ಲಿ ಅಂತಿಮಗೊಳಿಸಲಾದ ಜೇಷ್ಟತಾ ಪಟ್ಟಿಯನ್ನು ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ 7 ದಿನಗಳ ಒಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು. ಈ ತಾತ್ಕಾಲಿಕ ಜೇಷ್ಟತಾ ಪಟ್ಟಿಗೆ ಈ ಕೆಳಕಂಡ ಅಧಿಕಾರಿಗಳು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಈ ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲನೆ ನಡೆಸಿದ್ದು, ಕಾಲಂ – 4 ರಲ್ಲಿ ತಿಳಿಸಿರುವಂತೆ ವಿವರಣೆ ನೀಡಲಾಗಿದೆ.

| ಕ್ರ. ಸಂ. | ಆಕ್ಷೇಪಣೆ ವ್ಯಕ್ತ ಪಡಿಸಿರುವ ಅಧಿಕಾರಿಯವರ ವಿವರ (ಶ್ರೀಯುತರು) | ಆಕ್ಷೇಪಣೆ ವಿವರ | ಷರಾ |
|---|---|---|---|
| 1 | (1) ನವೀನ್‌ಕುಲಕರ್ಣಿ, ಪಿ.ಐ, ರಾಜ್ಯ ಗುಪ್ತವಾರ್ತೆ.<br>(2) ಬಾಬು ಆಂಜಿನಪ್ಪ, ಪಿ.ಐ, | ನಾವು ದಿನಾಂಕ:04.01.1999 ರಲ್ಲಿ ಆರ್.ಎಸ್.ಐ ಆಗಿ ಇಲಾಖೆಗೆ ಸೇರಿ ನಂತರ 2003ನೇ ಸಾಲಿನಲ್ಲಿ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಪಿ.ಎಸ್.ಐ ಆಗಿ ನೇಮಕಾತಿ ಹೊಂದಿರುತ್ತೇವೆ. ಸರ್ಕಾರದ | ಸರ್ಕಾರಿ ಆದೇಶದಂತೆ ಈಗಾಗಲೇ ಅಂತಿಮಗೊಳಿಸಲಾದ ಜೇಷ್ಟತೆಯಲ್ಲಿಯೇ ಮುಂದುವರೆಸಿ, ಇವರ ಆಕ್ಷೇಪಣೆಯನ್ನು ಪರಿಗಣಿಸಲಾಗಿದೆ. |

| | | | |
|---|---|---|---|
| | ರಾಜ್ಯ ಗುಪ್ತವಾರ್ತೆ. | ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ/64/ ಸೇನೆನಿ/2006, ದಿನಾಂಕ:28.08.2006 ರಲ್ಲಿ ಈ ಹಿಂದೆ ಆಯ್ಕೆಯಾಗಿ ಗ್ರಾಮೀಣ ಕೃಪಾಂಕ ರಹಿತವಾಗಿ ಪಟ್ಟಿ ಪರಿಷ್ಕರಿ ಸಿದಾಗ ಬೇರೆ ಇಲಾಖೆಗೆ ಮರು ಹಂಚಿಕೆ ಯಾದಲ್ಲಿ ಅಂತಹ ಅಭ್ಯರ್ಥಿಗಳ ಹಿಂದಿನ ಇಲಾಖೆಯಲ್ಲಿನ ಸೇವೆಯ ಜೇಷ್ಠತೆಯನ್ನು ಪರಿಗಣಿಸಲು ಆದೇಶವಿರು ವುದರಿಂದ ತಮ್ಮ ಹಿಂದಿನ ಸೇವಾ ಜೇಷ್ಠತೆಯ ಹಿರಿತನವನ್ನು ಪರಿಗಣಿಸಿ ಜೇಷ್ಠತಾ ಪಟ್ಟಿಯಲ್ಲಿ ದಿನಾಂಕ: 04.01.1999ರಲ್ಲಿ ಆಯ್ಕೆಯಾದವರ ಜೇಷ್ಠತಾ ಪಟ್ಟಿ ಕ್ರಮ ಸಂಖ್ಯೆಯಲ್ಲಿ ಸಂರಕ್ಷಿಸಲು ಕೋರಿರುತ್ತಾರೆ. | |
| 2 | ಡಿ.ಜಿ.ರಾಜಣ್ಣ, ಸಿಪಿಐ, ಕೊಳ್ಳೇಗಾಲ ವೃತ್ತ,<br>ಕೊಳ್ಳೇಗಾಲ. | ದಿನಾಂಕ:28.12.1998ರ ಆಯ್ಕೆ ಪಟ್ಟಿಯಲ್ಲಿ ತನ್ನ ಹೆಸರು ಬಿಟ್ಟಿದ್ದು, ತಾನು ಎಸ್.ಸಿ ಕೆಟಗರಿಯಲ್ಲಿ 109 ಅಂಕ ಪಡೆದಿದ್ದು, 101 ಅಂಕ ಪಡೆದವರನ್ನು ಆಯ್ಕೆ ಮಾಡಿದ್ದು, ನಾನು ಮಾನ್ಯ ಉಚ್ಛ ನ್ಯಾಯಾ ಲಯದಲ್ಲಿ ರಿಟ್ ಪಿಟಿಷನ್ ಸಲ್ಲಿಸಿದ್ದು, ಅಂಕಗಳ ಆಧಾರದ ಮೇರೆಗೆ ನೇಮಕಾತಿ ಮಾಡಲು ಆದೇಶಿಸಿದಂತೆ ದಿನಾಂಕ: 28.03.2001 ರಂದು ತರಬೇತಿಗೆ ನಿಯೋಜಿಸಿರುತ್ತಾರೆ. ನಂತರ ಗ್ರಾಮಾಣ ಕೃಪಾಂಕ ರಹಿತವಾಗಿ ಪಟ್ಟಿ ತಯಾರಿಸಿದಾಗ ತಾನು ಆಯ್ಕೆಯಾಗಿರು ತ್ತೇನೆ. ಸರ್ಕಾರದ ಸುತ್ತೋಲೆ ದಿನಾಂಕ: 02.07.2003ರ ಪ್ರಕಾರ ಸೇವೆಯಿಂದ ತೆಗೆದು ಹಾಕಿದ ಸ್ಥಾನದಲ್ಲಿ ತಮಗೆ ಸ್ಥಾನ ಕಲ್ಪಿಸಿ, ಆ ಜೇಷ್ಠತೆಯನ್ನು ನೀಡಲು ಕೋರಿರುತ್ತಾರೆ. | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |
| 3 | 1) ಸಿ.ಕಿರಣ್‌ಕುಮಾರ್, ಪಿ.ಐ, ಸಿಇಎಸ್ಇಸಿ ಠಾಣೆ, ಮೈಸೂರು.<br>2) ಮಾಲಗೌಡ.ಎಸ್.ನಾಯ್ಕರ್ ಸಿಪಿಐ, ಚಿಕ್ಕೋಡಿ, ಬೆಳಗಾವಿ.<br>3) ಎಂ.ಎಸ್.ರಮೇಶ್‌ರಾವ್, ಪಿ.ಐ<br>4) ಜಿ.ಪ್ರಭಾಕರ್, ಪಿ.ಐ, ಬಾಣಸವಾಡಿ ಸಂಚಾರಿ ಠಾಣೆ.<br>5) ಮೊಹಮದ್ ಇರ್ಷಾದ್, ಪಿ.ಐ, ಡಿ.ಸಿ.ಆರ್.ಇ, ಮೈಸೂರು.<br>6) ಎಸ್.ಪರಶಿವಮೂರ್ತಿ, ಪಿ.ಐ, ಬಜ್ಪೆ ಪೊಲೀಸ್ ಠಾಣೆ, ಮಂಗಳೂರು ನಗರ.<br>7) ವಿದ್ಯಾದರ ಡಿ.ಬೈರಿಕೇರ್, | ನಾವು ಮಾನ್ಯ ಭಾರತದ ಸರ್ವೋಚ್ಛ ನ್ಯಾಯಾಲಯದ ಆದೇಶದನ್ವಯ 2002ನೇ ಸಾಲಿನಲ್ಲಿ ನೇಮಕಾತಿ ಹೊಂದಿದ್ದು, ಆಗ ತಮ್ಮ ಜೇಷ್ಠತೆಯನ್ನು ರಕ್ಷಣೆ ಮಾಡುವುದಾಗಿ ತಿಳಿಸಲಾಗಿತ್ತು. ಪ್ರಧಾನ ಕಛೇರಿಯ ಆದೇಶ ದಿನಾಂಕ:30.12.2012 ರಲ್ಲಿ ನಮಗೆ ನ್ಯಾಯಯುತವಾಗಿ ದಿನಾಂಕ: 04.01.1999ರ ಜೇಷ್ಠತೆ ಮೆರಿಟ್ ಆಧಾರದ ಮೇರೆಗೆ ನೀಡಲಾಗಿದ್ದು, ಯಾವುದೇ ಆಕ್ಷೇಪಣೆ ವ್ಯಕ್ತವಾಗಿರುವುದಿಲ್ಲ. ಅದರಂತೆ ಮುಂಬಡ್ತಿ ಆಗಿದ್ದು, ಆಗಲೂ ಯಾವುದೇ ಆಕ್ಷೇಪಣೆ ವ್ಯಕ್ತವಾಗಿರುವುದಿಲ್ಲ ಈ ಸಂಬಂಧವಾಗಿ ಮಾನ್ಯ ಕೆ.ಎ.ಟಿ ಯಲ್ಲಿ ಪ್ರಕರಣ ಬಾಕಿ ಇದ್ದಾಗ್ಯೂ ಸಹ ಈ ಹಂತರದಲ್ಲಿ ಆಯ್ಕೆ ಪಟ್ಟಿ ಮತ್ತು ಜೇಷ್ಠತಾ ಪಟ್ಟಿಯನ್ನು ಬೇರ್ಪಡಿಸಿರು ತ್ತೀರಿ. ಮಾಣಿಕ್ಯಂ ಪ್ರಕರಣದಲ್ಲಿ ಸರ್ಕಾರ ವಾಗಲಿ, ಪೊಲೀಸ್ ಇಲಾಖೆಯಾಗಲಿ ತಾನಾಗಲಿ ಪ್ರತಿವಾದಿಯಾಗಿರುವುದಿಲ್ಲ. ಆದ್ದರಿಂದ, ಈ ಪ್ರಕರಣದ ತೀರ್ಪು ತಮ್ಮ ಜೇಷ್ಠತೆಗೆ | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |

| | | | |
|---|---|---|---|
| | ಪಿ.ಐ, ರಾಜ್ಯ ಗುಪ್ತವಾರ್ತೆ.<br>8) ಹೆಚ್.ಎಸ್.ಸುರೇಶ್, ಪಿ.ಐ, ತೀರ್ಥಹಳ್ಳಿ ವೃತ್ತ, ಶಿವಮೊಗ್ಗ ಜಿಲ್ಲೆ.<br>9) ಬರಮಪ್ಪ.ಎಸ್.ಲೋಕಾಪುರ, ಪಿ.ಐ, ಪಿ.ಟಿ.ಎಸ್, ದಾರವಾಡ. | ಅನ್ವಯಿಸುವುದಿಲ್ಲ. ಜೇಷ್ಟತಾ ನಿಯಮಗಳಲ್ಲಿ ಮೆರಿಟ್ ಆಧಾರದ ಮೇಲೆ ಜೇಷ್ಟತೆ ನೀಡಬೇಕಾಗಿರುತ್ತದೆ. ಈಗಾಗಲೇ ದಿನಾಂಕ:30.12.2017 ರಂದು ಪ್ರಕಟಿಸಿದ ಪಿ.ಐ ಜೇಷ್ಟತಾ ಪಟ್ಟಿಗೆ ಯಾವುದೇ ಆಕ್ಷೇಪಣೆ ವ್ಯಕ್ತವಾಗಿರುವುದಿಲ್ಲ. ಜೇಷ್ಟತೆಗೆ ಸಂಬಂಧಿಸಿದಂತೆ ಸರ್ಕಾರದಲ್ಲಿ ಸ್ಪಷ್ಟೀಕರಣ ಬಾಕಿ ಇದ್ದು, ಮಾನ್ಯ ಕೆ.ಎ.ಟಿ ಯಲ್ಲಿಯೂ ಸಹ ಪ್ರಕರಣ ಬಾಕಿ ಇರುತ್ತದೆ. ಕೆಲವು ನ್ಯಾಯಾಲಯಗಳ ಆದೇಶಗಳಲ್ಲಿ ಜೇಷ್ಟತೆ ಯನ್ನು ತೆಗೆಯಬಾರದೆಂದು ಈ ಹಂತದಲ್ಲಿ ಎರಡೆರಡು ಅಯ್ಕೆ ಪಟ್ಟಿ ಮತ್ತು ಜೇಷ್ಟತಾ ಪಟ್ಟಿ ಪ್ರಕಟಿಸಿರುವುದು ಸರಿಯಲ್ಲವೆಂದು, ಈ ಹಿಂದೆ ನಿಗದಿಪಡಿಸಿರುವ ಜೇಷ್ಟತೆಯನ್ನೇ ಮುಂದುವರೆಸಲು ಕೋರಿರುತ್ತಾರೆ. | |
| 4) | 1) ಟಿ.ಅಶೋಕ್‌ಕುಮಾರ್, ಪಿ.ಐ<br>2) ಕೆ.ಸಿ.ಪೂವಯ್ಯ, ಪಿ.ಐ<br>3) ಹರೀಶ್‌ಕುಮಾರ್.ಎನ್.ಎ, ಪಿ.ಐ<br>4) ಎಂ.ಸಿ.ಶಿವಕುಮಾರ್, ಪಿ.ಐ<br>5) ಕೃಷ್ಣಪ್ಪ.ಎನ್.ಜಿ, ಪಿ.ಐ<br>6) ಡಾ:ಅನಿಲ್‌ಕುಮಾರ್ ಪಿ ಗ್ರಾಮ ಪುರೋಹಿತ್. ಪಿ.ಐ.<br>7) ಜೆ.ಮೋಹನ್, ಡಿವೈ.ಎಸ್.ಪಿ.<br>8) ಬಿ.ಕೆ.ಲತಾ, ಸಿಪಿಐ.<br>9) ಜೆ.ಎಸ್.ತಿಪ್ಪೇಸ್ವಾಮಿ, ಪಿ.ಐ<br>10) ಸಿ.ಮಧುಸೂದನ್, ಪಿ.ಐ<br>11) ಜಿ.ಕೃಷ್ಣಮೂರ್ತಿ, ಪಿ.ಐ. | ಮಾಣಿಕ್ಯಂ ಪ್ರಕರಣವು ನ್ಯಾಯಾಂಗ ಇಲಾಖೆಗೆ ಸಂಬಂದಿಸಿದ್ದು, ಪೋಲೀಸ್ ಇಲಾಖೆಗೆ ಸಂಬಂದಿಸಿರುವುದಿಲ್ಲ. ಈ ವಿಷಯವನ್ನು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯವು ಸಹ ಸ್ಪಷ್ಟಪಡಿಸಿದೆ. ಹಲವು ನ್ಯಾಯಾಲಯದ ಪ್ರಕರಣಗಳಲ್ಲಿ ಮೆರಿಟ್ ಆಧಾರದ ಮೇರೆಗೆ ಜೇಷ್ಟತೆ ನಿಗಧಿಗೊಳಿಸಬೇಕಾಗಿದ್ದು, ಯಾವುದೇ ಕಾರಣಕ್ಕೂ ಜೇಷ್ಟತೆಯನ್ನು ಕಳೆದುಕೊಳ್ಳುವುದಿಲ್ಲವೆಂದು ಆದೇಶವಿರುವುದಾಗಿ ತಿಳಿಸಿರುತ್ತಾರೆ. 1990ನೇ ಸಾಲಿನಲ್ಲಿ ನಡೆದ ಪಿ.ಎಸ್.ಐ ಹುದ್ದೆಗೆ ವಿಳಂಬವಾಗಿ ನೇಮಕವಾದ 43 ಪಿ.ಎಸ್.ಐ ರವರಿಗೆ ಹಿಂದಿನ ದಿನಾಂಕದ ಜೇಷ್ಟತೆ ನೀಡಲಾಗಿದೆ. ಸರ್ಕಾರದ ನಿರ್ದೇಶನದಂತೆ ಕ್ರಮ ಕೈಗೊಳ್ಳುವಾಗ ಕಡಿಮೆ ಅಂಕ ಪಡೆದ ಪಿ.ಎಸ್.ಐ ರವರು ಹೆಚ್ಚಿನ ಅಂಕ ಪಡೆದ ಪಿ.ಎಸ್.ಐ ರವರ ಮೇಲೆ ಜೇಷ್ಟತೆ ಪಡೆಯುತ್ತಿದ್ದು ಜೇಷ್ಟತೆ ನಿಯಮಕ್ಕೆ ವಿರುದ್ಧವಾಗಿರುತ್ತದೆ. ಈಗ್ಗೆ ಹಲವಾರು ಜೇಷ್ಟತಾ ಪಟ್ಟಿಗಳನ್ನು ಅಂತಿಮಗೊಳಿಸಿದ್ದು, ಯಾವುದೇ ಆಕ್ಷೆಪಣೆ ಗಳು ಸ್ವೀಕೃತವಾಗದೇ ಹಾಲಿ ಆಕ್ಷೇಪಿಸು ವುದು ಸರಿಯಲ್ಲ. ಆದ್ದರಿಂದ, ಚಾಲ್ತಿಯಲ್ಲಿರುವ ಪಿ.ಐ ಹುದ್ದೆಯ ಜೇಷ್ಟತೆ ಮುಂದುವರೆಸಿ ಡಿವೈ.ಎಸ್.ಪಿ ಹುದ್ದೆಗೆ ಮುಂಬಡ್ತಿ ನೀಡಲು ಕೋರಿರುತ್ತಾರೆ. | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |
| 5) | ಎಸ್.ಶ್ರೀಧರ್, ಪಿ.ಐ, ಬೆಸ್ಕಾಂ ಜಾಗೃತದಳ, ಬೆಂಗಳೂರು. | ಎಸ್.ಆರ್.ಮಾಣಿಕ್ಯಂ ಪ್ರಕರಣವು ಪೋಲೀಸ್ ಇಲಾಖೆಗೆ ಅನ್ವಯಿಸುವುದಿಲ್ಲ. ತನ್ನ ಪ್ರಕರಣ ದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಪ್ರಾಸ್ಪೆಕ್ಟೀವ್ ಎಂಬ ಪದ ಬಳಕೆಯಾಗಿ ರುವುದಿಲ್ಲ. ಸರ್ಕಾರದ ಸುತ್ತೋಲೆ ದಿನಾಂಕ: 02.07.03 ಮತ್ತು 20.10.2016ರವುಗಳು ತನಗೆ | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |

| | | | |
|---|---|---|---|
| | | ಅನ್ವಯವಾಗುವುದಿಲ್ಲ. ಸರ್ಕಾರದ ಪತ್ರ ದಿನಾಂಕ:16.04.2002ಅನ್ನು ಪರಾಮರ್ಶಿ ಸಲು ಕೋರಿರುತ್ತಾರೆ. ಈಗಾಗಲೇ ಅಂತಿಮಗೊಳಿಸಿ ದಾಗ ಸ್ಥಾನ ಸರಿಯಾಗಿದ್ದು, ಉಚ್ಛ ನ್ಯಾಯಾಲಯದ ಜೆ.ಟಿ.ರಾಮಸ್ವಾಮಿ ಮತ್ತು ಇತರರ ಆದೇಶದಂತೆ ಒಮ್ಮೆ ಅಂತಿಮಗೊಳಿಸಿದ ಜೇಷ್ಟತಾ ಪಟ್ಟಿಯನ್ನು ಪುನ: ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ. ಸರ್ಕಾರದಿಂದ ಸ್ಪಷ್ಟೀಕರಣ ಮತ್ತು ಕೆ.ಎ.ಟಿ ಪ್ರಕರಣಗಳು ಬಾಕಿ ಇರುತ್ತದೆ. ಶ್ರೀ ಎನ್.ಕುಮಾರ್ ರವರ ತೀರ್ಪು ಈವರೆಗೆ ಸೆಟಸೈಡ್ ಆಗಿರುವು ದಿಲ್ಲ. ಮಾನ್ಯ ನ್ಯಾಯಾಲಯಗಳಲ್ಲಿ ಮೆರಿಟ್ ಆಧಾರದ ಮೇರೆಗೆ ಪರಿಗಣಿಸಲು ಆದೇಶವಿರುತ್ತದೆ. ಮಾನ್ಯ ಕೆ.ಎ.ಟಿ ಯಲ್ಲಿನ ಮಹಂತೇಶ್ ಪ್ರಕರಣದಲ್ಲಿ ಎಸ್.ಶ್ರೀಧರ್ ಮತ್ತು ಇತರರು ಹಾಗೂ ವಿಠ್ಠಲ್ ಮತ್ತು ಇತರರ ಪ್ರಕರಣಕಿಂತ ಹೇಗೆ ಬಿನ್ನವಾಗಿರುತ್ತದೆ ಎಂದು ವಿವರಿ ಸಿರುತ್ತದೆ. ಆದ್ದರಿಂದ, ನನಗೆ ನ್ಯಾಯ ದೊರಕಿಸಿಕೊಡಲು ಕೋರಿರುತ್ತಾರೆ. | |
| 6 | (1) ಮಧುಸೂದನ್.ಸಿ, ಪಿ.ಐ.<br>(2) ಜೆ.ಎಸ್.ತಿಪ್ಪೇಸ್ವಾಮಿ, ಪಿ.ಐ | ಮಾನ್ಯ ನ್ಯಾಯಾಲಯಗಳ ಆದೇಶಗಳ ಅನ್ವಯ ತಮಗೆ ಅಂತಿಮಗೊಳಿಸಲಾದ ಜೇಷ್ಟತಾ ಪಟ್ಟಿಗಳಲ್ಲಿ ಸರಿಯಾದ ಸ್ಥಾನ ಕಲ್ಪಿಸಿದ್ದು, ಈಗ ಬದಲಾವಣೆ ಮಡುವು ದರಿಂದ ಮಾನ್ಯ ನ್ಯಾಯಾಲಯ ಮತ್ತು ಜೇಷ್ಟತೆ ನಿಯಮಗಳಿಗೆ ವಿರುದ್ಧವಿದ್ದು, ಈ ಸಂಬಂಧ ಸರ್ಕಾರದಿಂದ ಸ್ಪಷ್ಟೀಕರಣ ಪಡೆದು ಮುಂದಿನ ಕ್ರಮ ವಹಿಸಲು ಕೋರಿರುತ್ತಾರೆ. | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |
| 7 | (1) ಜೆ.ಜೆ.ತಿರುಮಲೇಶ್, ಡಿ.ಎಸ್.ಪಿ.<br>(2) ರವೀಂದ್ರನಾಥ್.ಎಸ್.ಜಹಗೀರ್ ದಾರ್, ಡಿ.ಎಸ್.ಪಿ. | ಮಾಣಿಕ್ಯಂ ಪ್ರಕರಣದಲ್ಲಿ ಸರ್ಕಾರವಾಗಲಿ ಪೊಲೀಸ್ ಇಲಾಖೆಯಾಗಲಿ ಪ್ರತಿವಾದಿ ಆಗಿರುವುದಿಲ್ಲ. ಉಚ್ಛ ನ್ಯಾಯಾಲಯದಲ್ಲಿ ನ್ಯಾ.ಎನ್.ಕುಮಾರ್ ರವರ ತೀರ್ಪಿನಲ್ಲಿ ಗ್ರಾಮೀಣ ಕೃಪಾಂಕ ಸಹಿತವಾಗಿ ಆಯ್ಕೆಯಾದ ಅಭ್ಯರ್ಥಿಗಳ ಸ್ಥಾನದಲ್ಲಿ ಆಯ್ಕೆಯಾದ ಗ್ರಾಮೀಣ ರಹಿತ ಅಭ್ಯರ್ಥಿ ಗಳಿಗೆ ಜೇಷ್ಟತೆ ನೀಡುವುದು ಎಂದು ಆದೇಶವಾಗಿದ್ದು, ಇನ್ನೂ ಊರ್ಜಿತವಾಗಿ ಇರುತ್ತದೆ. ಮಾಣಿಕ್ಯಂ ಪ್ರಕರಣವು ಜೇಷ್ಟತಾ ನಿಯಮ 5ಕ್ಕೆ ವಿರುದ್ಧವಾಗಿ ಇದ್ದು, ಉಚ್ಛ ನ್ಯಾಯಾಲಯದ ಆದೇಶ ದಿನಾಂಕ:21.11.2011 ರಂದು ಹೊರಡಿಸಿದ ಆದೇಶದಲ್ಲಿ ಸರ್ಕಾರದ ಸುತ್ತೋಲೆ ದಿನಾಂಕ:02.07.2003 ಅನ್ನು ಬದಿಗಿರಿಸಿ, ಊರ್ಜಿತದಲ್ಲಿರುತ್ತದೆ. ಗಣಪತಿ ಮತ್ತು ಇತರರು ಜೇಷ್ಟತೆ ಕುರಿತು ನೇಮಕಾತಿ ಆದೇಶದಲ್ಲಿನ ಕ್ರಮಾಂಕವನ್ನಲದೇ ನೇಮಕಾತಿ ಹೊಂದಿದ ದಿನಾಂಕವನ್ನು ಪರಿಗಣಿಸಬೇಕೆಂದು ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿ, ಗಂಜಿಗಟ್ಟ | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |

| | | | |
|---|---|---|---|
| | | ಪ್ರಕರಣವನ್ನು ಎತ್ತಿ ಹಿಡಿದಿರುತ್ತದೆ. ತಿದ್ದುಪಡಿ ಆದೇಶವು ಚಾಲ್ತಿ ನಿಯಮ ಗಳಿಗೆ ಹೊರತಾಗಿರುತ್ತದೆ. ಮಾನ್ಯ ನ್ಯಾಯಾಲಯಗಳ ಆದೇಶಗಳನ್ವಯ ಈಗಾಗಲೇ ಅಂತಿಮಗೊಳಿಸಿದ ಜೇಷ್ಟತೆ ಸರಿಯಿದ್ದು, ತಿದ್ದುಪಡಿ ಆದೇಶಕ್ಕೆ ಆಕ್ಷೇಪ ವಿರುವುದಾಗಿ, ತಿದ್ದುಪಡಿ ಮಾಡಲು ಉದ್ದೇಶಿಸಿರುವುದನ್ನು ಕೈಬಿಡಲು ಇಲ್ಲ ವಾದಲ್ಲಿ ಸೂಕ್ತ ವೇದಿಕೆಯಲ್ಲಿ ಕಾನೂನು ಪ್ರಕ್ರಿಯೆ ಹೂಡುವುದು ಅನಿವಾರ್ಯವೆಂದು ತಿಳಿಸಿರುತ್ತಾರೆ. | |
| (8) | (1) ಜಿ.ಕೃಷ್ಣಮೂರ್ತಿ, ಪಿ.ಐ., ರಾಜ್ಯ ಗುಪ್ತವಾರ್ತೆ, ಮಡಿಕೇರಿ.<br>(2) ಅಶೋಕಕುಮಾರ, ಟಿ, ಪಿ.ಐ. ನರಸಿಂಹರಾಜ ಪೊಲೀಸ್ ಠಾಣೆ, ಮೈಸೂರು.<br>(3) ಸಿ.ಕಿರಣ್‌ಕುಮಾರ್ ಮತ್ತು ಇತರರು, ಪಿ.ಐ, ಸೆಸ್ಕಾಂ ವಿಚಕ್ಷಣಾ ದಳ, ಮೈಸೂರು. | ಕರ್ನಾಟಕ ಉಚ್ಛ ನ್ಯಾಯಾಲಯದ ಡಬ್ಲ್ಯೂ ಪಿ 16899-16912/2016(ಎಸ್‌ಕೆಎಟಿ) ದಿನಾಂಕ:24.03.2017 ರಲ್ಲಿ ಶ್ರೀ ಮಾಣಿಕ್ಯ, ಶ್ರೀ ಶ್ರೀಧರ್ ಮತ್ತು ಶ್ರೀ ವಿಠಲ್‌ರವರುಗಳ ಕೇಸಿನಲ್ಲಿ ಘನ ಭಾರತದ ಸರ್ವೋಚ್ಛ ನ್ಯಾಯಾಲಯದಿಂದ ಬಂದಿರುವ ಎಲ್ಲಾ ತೀರ್ಪುಗಳನ್ನು ಉಲ್ಲೇಖಿಸಿ, ಪರಾಮರ್ಶಿಸಿ ಆಯ್ಕೆ ಪ್ರಕ್ರಿಯೆಯಲ್ಲಿ ಪಡೆದಿರುವ ಅಂಕಗಳ ಆಧಾರದ ಮೇಲೆ ಜೇಷ್ಟತೆಯನ್ನು ನಿಗಧಿಪಡಿಸಬೇಕೆಂದು ಸ್ಪಷ್ಟವಾಗಿ ತೀರ್ಪಿನಲ್ಲಿ ಉಲ್ಲೇಖಿಸಿದೆ. ಆದ್ದರಿಂದ, ಜೇಷ್ಟತಾ ಪಟ್ಟಿ ಯನ್ನು ಪರಿಷ್ಕರಿಸುವ ಮುನ್ನ ಸರ್ಕಾರದಿಂದ ಸ್ಪಷ್ಟ ಅಭಿಪ್ರಾಯವನ್ನು ಪಡೆಯಬೇಕೆಂದು ಇಲ್ಲವಾದಲ್ಲಿ ಸಂವಿಧಾನಬದ್ಧ ಹಕ್ಕಿಗೆ ಚ್ಯುತಿಯಾಗುತ್ತದೆ ಅಲ್ಲದೇ ಜೇಷ್ಟತಾ ನಿಯಮ ಮತ್ತು ನ್ಯಾಯಾಲಯ ತೀರ್ಪಿನ ಉಲ್ಲಂಘನೆ ಯಾಗುವುದಾಗಿ ತಿಳಿಸಿರುತ್ತಾರೆ. | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |
| (9) | (1) ಪಿ.ರವಿ, ಪಿ.ಐ, ಇಂದಿರಾನಗರ ಪೊಲೀಸ್ ಠಾಣೆ, ಬೆಂಗಳೂರು.<br>(2) ಸಿ.ಬಾಲಕೃಷ್ಣ, ಪಿ.ಐ, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು.<br>(3) ಎನ್.ಪುರುಷೋತ್ತಮ್, ಪಿ.ಐ, ಆಂತರಿಕ ಭದ್ರತಾ ವಿಭಾಗ, ಬೆಂಗಳೂರು. | ತಿದ್ದುಪಡಿ ಆದೇಶದಲ್ಲಿ ಈ ಕೆಳಕಂಡ ಪಿ.ಐ ರವರ ಹೆಸರುಗಳನ್ನು ಪಿ.ಎಸ್.ಐ ಹುದ್ದೆಗೆ ವರದಿ ಮಾಡಿದ ದಿನಾಂಕ ನಿಗಧಿ ಪಡಿಸಿರು ವುದಿಲ್ಲವಾದ್ದರಿಂದ, ನೇಮಕಾತಿ ಹೊಂದಿದ ದಿನಾಂಕಗಳಿಗೆ ಅನುಗುಣವಾಗಿ ಸ್ಥಾನ ನಿಗಧಿಪಡಿಸಿ, ಮಾರ್ಪಾಟು ಮಾಡಲು ಕೋರಿ ರುತ್ತಾರೆ.<br>(1) ಎಂ.ಎಸ್.ಶ್ರೀನಿವಾಸ<br>(2) ಪಿ.ವಿ.ವೆಂಕಟೇಶ್<br>(3) ಬ್ರಿಜೇಶ್ ಮ್ಯಾಥ್ಯೂ.<br>(4) ರಘುಕುಮಾರ್ | ಪರಿಗಣಿಸಲಾಗಿದೆ. |
| 10 | ಅರ್.ರಾಜೇಶ್, ಪಿ.ಐ, ಡಿ.ಸಿ.ಐ.ಬಿ, ಕೋಲಾರ. | ಸರ್ಕಾರದ ಸುತ್ತೋಲೆ ದಿನಾಂಕ:02.07.03 ರನ್ವಯ ಕ್ರಮ ಕೈಗೊಳ್ಳಲು, ಮಾಣಿಕ್ಯ ಪ್ರಕರಣದಲ್ಲಿ ಸರ್ಕಾರವಾಗಲಿ ಪೊಲೀಸ್ ಇಲಾಖೆಯಾಗಲಿ ಪ್ರತಿವಾದಿಯಾಗಿಲ್ಲದ ಕಾರಣ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಬೈಂಡಿಂಗ್ ಆಗಿರುವುದಿಲ್ಲ. ಎಸ್.ಆರ್.ಮಾಣಿಕ್ಯ ಪ್ರಕರಣದ ತೀರ್ಪನ್ನು ಪ್ರಶ್ನಿಸುವುದು ಅವಶ್ಯಕ ಎಂದು ಕಾನೂನು ಇಲಾಖೆ ಅಭಿಪ್ರಾಯಪಟ್ಟಿದೆ. ಜೇಷ್ಟತೆ ನಿಯಮಗಳಲ್ಲಿ ಅಂಕಗಳ ಆಧಾರದ ಮೇಲೆ ಜೇಷ್ಟತೆ ನಿಗಧಿಗೊಳಿಸಲು ಸ್ಪಷ್ಟವಾಗಿರುತ್ತದೆ. | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ಧವಾಗಿರುತ್ತದೆ. |

| | | | |
|---|---|---|---|
| | | ಕರ್ನಾಟಕ ಉಚ್ಛ ನ್ಯಾಯಾಲಯದ ರಿಟ್ ರ್ಜಿ ಸಂಖ್ಯೆ: 12690/2007 ದಿನಾಂಕ:21.11.2011ರಲ್ಲಿ ಮೆರಿಟ್ ಪ್ರಕಾರ ಜೇಷ್ಟತೆ ಮಾಡಬೇಕೆಂದು ಗ್ರಾಮೀಣ ಕೃಪಾಂಕರಹಿತವಾಗಿ ನೇಮಕಗೊಂಡ ಅಭ್ಯರ್ಥಿಗಳ ಜೇಷ್ಟತೆಯನ್ನು ನಿರ್ಧರಿಸುವ ಸಲುವಾಗಿ ಅಭಿಪ್ರಾಯ ಪಟ್ಟಿದ್ದು, ಯಾರೂ ಪ್ರಶ್ನಿಸಿರುವುದಿಲ್ಲ. ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಿನಾಂಕ:24.03.2017 ರಂದು ದ್ವಿ ಸದಸ್ಯ ಪೀಠದಿಂದ ತೀರ್ಪು ಹೊರಬಂದಿದ್ದು, ಈ ತೀರ್ಪಿನಲ್ಲಿ ಎಸ್.ಆರ್.ಮಾಣಿಕ್ಯ ಪ್ರಕಣದ ತೀರ್ಪು ಗ್ರಾಮೀಣ ಕೃಪಾಂಕ ರಹಿತ ಪರಿಷ್ಕೃತ ಪಟ್ಟಿಯ ಅಭ್ಯರ್ಥಿಗಳ ಜೇಷ್ಟತೆಗೆ ಅನ್ವಯಿ ಸುವುದಿಲ್ಲ ಎಂದು ಸ್ಪಷ್ಟವಾಗಿ ತೀರ್ಪನ್ನು ನೀಡಿರುತ್ತಾರೆ. ಸರ್ಕಾರದ ಸುತ್ತೋಲೆ ದಿನಾಂಕ:20.10.2016 ಅನ್ನು ರದ್ದು ಪಡಿಸಲು ಈಗಾಗಲೇ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದು, ಜೇಷ್ಟತೆಯಲ್ಲಿರುವ ಪಿ.ಎಸ್.ಐ ರವರಿಗೆ ಮೇಲಿನ ಹುದ್ದೆಗೆ ಮುಂಬಡ್ತಿ ಆದಾಗ ಯಾರು ಪ್ರಶ್ನಿಸದೇ ಇದ್ದು, ಈಗ ಪ್ರಶ್ನಿಸುವುದು ಸಮಂಜಸವಲ್ಲವೆಂದು, ಮಾನ್ಯ ಕೆ.ಎ.ಟಿ ಯಲ್ಲಿ ಅರ್ಜಿ ವಿಚಾರಣೆಗೆ ಬಾಕಿ ಇರುವಾಗ ಜೇಷ್ಟತ ಪಟ್ಟಿ ಪರಿಷ್ಕರಿಸ ಬಾರದೆಂದು ಕೋರಿರುತ್ತಾರೆ. | |
| 11 | ಎಲ್.ವೈ.ರಾಜೇಶ್, ಆರಕ್ಷಕ ವೃತ್ತ ನಿರೀಕ್ಷಕರು, ಅತ್ತಿಬೆಲೆ ವೃತ್ತ. ಅತ್ತಿಬೆಲೆ. | ತಾನು ಶ್ರೀಧರ್ ಮತ್ತು ಇತರರ ತೀರ್ಪಿನ ಅನ್ವಯ 2002ನೇ ಸಾಲಿನಲ್ಲಿ ನೇಮಕಾತಿ ಹೊಂದಿದ್ದು, ತಮ್ಮ ನೇಮಕಾತಿಯಲ್ಲಿ ಪ್ರಾಸ್ಪೆಕ್ಟೀವ್ ನೇಮಕಾತಿ ಎನ್ನುವ ಪದವು ಎಲ್ಲೂ ಬಳಕೆಯಾಗಿರುವುದಿಲ್ಲ. ನಮಗೆ ಮಾಣಿಕ್ಯ ಪ್ರಕರಣ ಅನ್ವಯವಾಗುವುದಿಲ್ಲ. ನಾವು 2002ನೇ ಸಾಲಿನಲ್ಲಿ ನೇಮಕಾತಿ ಹೊಂದಿದ್ದು, ದಿನಾಂಕ:02.07.2003ರ ಸುತ್ತೋಲೆಯ ಅಂತಿಮ ಭಾಗದಲ್ಲಿ ತಿಳಿಸಿರುವ ಪಾಯಿಂಟ್ 3 ನಮಗೆ ಅನ್ವಯಿಸುವುದಿಲ್ಲ. 2002ನೇ ಸಾಲಿನಲ್ಲಿ ನಮಗೆ ನೇಮಕಾತಿ ನೀಡಿ, ಜೇಷ್ಟತೆ ಸಂರಕ್ಷಿಸುವುದಾಗಿ ಆಶ್ವಾಸನೆ ನೀಡಲಾಗಿದೆ. ಪ್ರಧಾನ ಕಛೇರಿಯಿಂದ ಪ್ರಕಟಿಸಲಾದ ಅಂತಿಮ ಜೇಷ್ಟತಾ ಪಟ್ಟಿ ದಿನಾಂಕ:21.11.17 ರಲ್ಲಿ ಸರಿಯಾದ ಸ್ಥಾನದಲ್ಲಿದ್ದು, ಜಿ.ಟಿ.ರಾಮಸ್ವಾಮಿ ಪ್ರಕರಣದಲ್ಲಿ ಒಂದು ಬಾರಿ ಅಂತಿಮ ಜೇಷ್ಟಾ ಪಟ್ಟಿಯನ್ನು ಬಿಡುಗಡೆ ಮಾಡಿದ್ದಲ್ಲಿ ಯಾವುದೇ ಕಾರಣಕ್ಕೂ ಮತ್ತೇ ಅದರ ಬದಲಾವಣೆ ಮಾಡಕೂಡದು ಎಂದು ಆದೇಶದಲ್ಲಿ ತಿಳಿಸಿದ್ದು, ಮತ್ತೊಮ್ಮೆ ಮಾರ್ಪಾಟು ಮಾಡಿದರೆ ನ್ಯಾಯಾಲಯದ ಆದೇಶ ಉಲ್ಲಂಘನೆ ಆಗುತ್ತದೆ. ಮಾನ್ಯ ಕೆ.ಎ.ಟಿ ಯಲ್ಲಿ ಪ್ರಕರಣ ಬಾಕಿ ಇರುವ ಹಂತದಲ್ಲಿ ತಿದ್ದುಪಡಿಗೆ ಅವಕಾಶ ಇರುವುದಿಲ್ಲ ಹಾಗೂ ಈ ಪ್ರಕರಣದಲ್ಲಿ ತಡೆಯಾಗಲಿ ಮಾರ್ಪಾಟು ಮಾಡುವುದಕ್ಕಾಗಲಿ | ಸರ್ಕಾರದ ನಿರ್ದೇಶನದನ್ವಯ ಮತ್ತು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಮೇರೆಗೆ ತಿದ್ದುಪಡಿ ಆದೇಶದಲ್ಲಿ ಉದ್ದೇಶಿ ಸಲಾಗಿರುವ ತೀರ್ಮಾನವು ಕ್ರಮ ಬದ್ದವಾಗಿರುತ್ತದೆ. |

| | | | |
|---|---|---|---|
| | | ಆದೇಶ ಇರುವುದಿಲ್ಲ. ಈಗ ಮಾಡಿರುವ ತಾತ್ಕಾಲಿಕ ಜೇಷ್ಟತಾ ಪಟ್ಟಿ ತಿದ್ದುಪಡಿ ಆದೇಶವು ಕೆ.ಜೆ.ಎಸ್ ಜೇಷ್ಟತೆ ನಿಯಮಕ್ಕೆ ವಿರುದ್ಧವಾಗಿರುತ್ತದೆ. ಶ್ರೀ ಗಂಜಿಗಟ್ಟಿ ಮತ್ತು ಶಿವಪ್ರಕಾಶ ರವರುಗಳ ಜೆಡ್ಜ್‌ಮೆಂಟ್ ಪ್ರಕರಣದಲ್ಲಿ ಜಸ್ಟಿಸ್ ಎನ್.ಕುಮಾರ್ ಉಚ್ಛ ನ್ಯಾಯಾಲಯ ಮತ್ತು ಕೆ.ಎ.ಟಿ ಯಲ್ಲಿ ನೀಡಿರುವ ಆದೇಶಗಳು ಇಂದಿಗೂ ಅನೂರ್ಜಿತವಾಗಿರು ವುದಿಲ್ಲ. ಆದ್ದರಿಂದ, ಸಾಮಾಜಿಕ ನ್ಯಾಯ ಕೊಡಲು ಕೋರಿರುತ್ತಾರೆ. | |

ಮೇಲ್ಕಂಡಂತೆ ಕಾಲಂ – 4 ರಲ್ಲಿ ವಿವರಿಸಿರುವ ವಿವರಣೆಯನ್ನು ನೀಡಿ, ಈ ಕಛೇರಿಯ ಉಲ್ಲೇಖಿತ(1)ರ ದಿನಾಂಕ:30.12.2013ರ ತಿದ್ದುಪಡಿ ಆದೇಶವನ್ನು ರದ್ದುಗೊಳಿಸಿದೆ. ಉಲ್ಲೇಖಿತ(6) ರಲ್ಲಿನ ಉದ್ದೇಶಿತ ತಾತ್ಕಾಲಿಕ ತಿದ್ದುಪಡಿ ಆದೇಶವನ್ನು ಈ ಕೆಳಕಂಡಂತೆ ಅಂತಿಮಗೊಳಿಸಿ ಆದೇಶಿಸಲಾಗಿದೆ.

| ಕ್ರ.ಸಂ. | ಪಿ.ಎಸ್.ಐ ರವರ ಹೆಸರು (ಶ್ರೀಯುತರು) | ಕರ್ತವ್ಯಕ್ಕೆ ವರದಿ ಮಾಡಿದ ದಿನಾಂಕ | ಅಂತಿಮಗೊಳಿಸಲಾದ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆ | ಹಾಲಿ ಮಾನ್ಯ ನ್ಯಾಯಾಲಯ ಮತ್ತು ಸರ್ಕಾರದ ನಿರ್ದೇಶನದಂತೆ ನಿಗಧಿಗೊಳಿಸಲಾದ ಜೇಷ್ಠತೆ |
|---|---|---|---|---|
| 1 | **2** | **3** | **4** | **5** |
| 1 | D.G.RAJANNA | 28-03-2001 | 4211 | 4445 A |
| 2 | BHARAMAPPA SIDDAPPA LOKAPUR | 16-04-2002 | 4093 | 4677 A |
| 3 | MOHAMED IRSHADH | 16-04-2002 | 4096 | 4677 B |
| 4 | SRIDHAR | 16-04-2002 | 4106 | 4677 C |
| 5 | PRABHAKR G | 16-04-2002 | 4110 | 4677 D |
| 6 | RAJESH L Y | 16-04-2002 | 4111 | 4677 E |
| 7 | MALAGOUDA NAIKAR | 16-04-2002 | 4113 | 4677 F |
| 8 | RAMESH RAO M S | 16-04-2002 | 4119 | 4677 G |
| 9 | KIRAN KUMAR C | 16-04-2002 | 4140 | 4677 H |
| 10 | PARASHIVAMURTHY S | 16-04-2002 | 4170 | 4677 I |
| 11 | SANTHOSHKUMAR D | 16-04-2002 | 4187 | 4677 J |
| 12 | VIDYADHAR DATTARAM BAIKERIKAR | 16-04-2002 | 4191 | 4677 K |
| 13 | SURESH H S | 16-04-2002 | 4192 | 4677 L |
| 14 | ASHOK KUMAR T | 26-08-2003 | 4089 | 4771 A |
| 15 | NAVEEN KULAKARNI | 04-01-1999 | 4094 | 4094 |
| 16 | LOKESH A C | 26-08-2003 | 4095 | 4771 C |
| 17 | RAVINDRA S JAHAGIRDHAR | 26-08-2003 | 4097 | 4771 D |
| 18 | ANIL KUMAR P GRAMAPUROHITH | 26-08-2003 | 4104 | 4771 E |
| 19 | THIPPERUDHRA G S | 26-08-2003 | 4115 | 4771 F |
| 20 | RAJESH R | 26-08-2003 | 4124 | 4771 G |
| 21 | SANJEEVKUMAR JAMBOO MAHAJAN | 26-08-2003 | 4143 | 4771 H |
| 22 | THIPPESWAMY J S | 26-08-2003 | 4148 | 4771 I |
| 23 | ANNAPURNA C | 26-08-2003 | 4151 | 4771 J |
| 24 | KRISHNAMURTHY G | 26-08-2003 | 4153 | 4771 K |
| 25 | NAGARAJA M | 26-08-2003 | 4154 | 4771 L |
| 26 | RAJESHA K | 26-08-2003 | 4163 | 4771 M |
| 27 | BABU ANJANAPPA | 04-01-1999 | 4175 | 4175 |
| 28 | SHIVAKUMAR M C | 26-08-2003 | 4176 | 4771 O |
| 29 | MANJUNATHA M | 26-08-2003 | 4184 | 4771 P |

| | | | | |
|---|---|---|---|---|
| 30 | NANADAHEB LAKSMAN SINGH KODAGE | 26-08-2003 | 4185 | 4771 Q |
| 31 | THIRUMALESH J J | 26-08-2003 | 4186 | 4771 R |
| 32 | MEHABOOB ALINADAF | 26-08-2003 | 4190 | 4771 S |
| 33 | MADHUSUDHANA C | 26-08-2003 | 4193 | 4771 T |
| 34 | MOHAN J | 26-08-2003 | 4195 | 4771 U |
| 35 | KRISHNAPPA N G | 26-08-2003 | 4196 | 4771 V |
| 36 | HARISHKUMAR M A | 26-08-2003 | 4198 | 4771 W |
| 37 | JAYALAKSHMAMMA N | 26-08-2003 | 4209 | 4771 X |
| 38 | POOVAIAH K C | 26-08-2003 | 4213 | 4771 Y |
| 39 | RAMESH H B | 26-08-2003 | 4222 | 4771 Z |
| 40 | LATHA B K | 26-08-2003 | 4231 | 4771 AA |
| 41 | ANJUMAN BANU K | 26-08-2003 | 4232 | 4771 AB |
| 42 | RAJU | 12-05-2004 | 4206 | 5418 A |

**(ಪಿ.ಹರಿಶೇಖರನ್)**
ಐ.ಜಿ.ಪಿ(ಕೇಂದ್ರಸ್ಥಾನ-1)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ.

**ರವರಿಗೆ ಅಗತ್ಯ ಕ್ರಮಕ್ಕಾಗಿ:-**

(1) ಸಂಬಂಧಪಟ್ಟ ಪಿ.ಎಸ್.ಐ/ಪಿ.ಐ ರವರಿಗೆ ಕಮೀಷನರೇಟ್/ವಲಯಾಧಿಕಾರಿಗಳು/ಘಟಕಾಧಿಕಾರಿಗಳ ಮುಖಾಂತರ.
(2) ಎಲ್ಲಾ ಕಮೀಷನರೇಟ್‌ರವರಿಗೆ.
(3) ಎಲ್ಲಾ ವಲಯಾಧಿಕಾರಿಗಳಿಗೆ.
(4) ಎಲ್ಲಾ ಘಟಕಾಧಿಕಾರಿಗಳಿಗೆ.
(5) ಹೆಚ್ಚುವರಿ ಆರಕ್ಷಕ ಮಹಾನಿರ್ದೇಶಕರು, ಗಣಕವಿಭಾಗ, ಬೆಂಗಳೂರು ರವರಿಗೆ ಪೊಲೀಸ್ ವೆಬ್‌ಸೈಟ್‌ನಲ್ಲಿ ಪ್ರಕಟಣೆಯ ಅಗತ್ಯ ಕ್ರಮಕ್ಕಾಗಿ.
(6) ಆದೇಶ ಪುಸ್ತಕ.